

# ಜುಮುಕಿ ಜಮಾನ

**ಒಡವೆಯ ಗೊಡವೆ ಬೇಡ ಎನ್ನುವವರನ್ನೂ ಜುಮುಕಿ ತನ್ನತ್ತ ಸೆಳೆಯುತ್ತಿದೆ. ಸಾಂಪ್ರದಾಯಿಕತೆಗೂ, ದೇಸೀತನಕ್ಕೂ, ಟ್ರೆಂಡ್‌ಗೂ ಹೊಂದಿಕೊಳ್ಳುವ ಜುಮುಕಿ ಕಾಲಕಾಲಕ್ಕೆ ಅಪ್‌ಡೇಟ್ ಆಗುತ್ತ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುತ್ತಲೇ ಬಂದಿದೆ.**

■ ಸುಮಾ ಬಿ.

ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಹರ್ಷಿಕಾ ಬೆಳ್ಳಂಬೆಳಿಗ್ಗೆ ಅಮ್ಮನಿಗೆ ಫೋನ್ ಮಾಡಿದವಳೇ ‘ಮಮ್ಮಿ ನೀನು ನನ್ನ ಮದುವೆ ಸಮಯದಲ್ಲಿ ತೆಗೆಸಿಕೊಟ್ಟ ಮುತ್ತಿನೋಲೆ ಜುಮುಕಿ ಎತ್ತಿಡು. ಮುಂದಿನ ವಾರ ನನ್ನ ಫ್ರೆಂಡ್ ಶ್ವೇತಾಳ ತಂಗಿ ಮದುವೆ. ಜುಮುಕಿ ಹಾಕಿಕೊಂಡು ಮದುವೆಗೆ ಹೋಗುವೆ’ ಎಂದು ಫೋನ್ ಇಟ್ಟಳು. ಅತ್ತ ಮಗಳ ಮಾತು ಕೇಳಿ ತಾಯಿಗೆ ಆಶ್ಚರ್ಯ.10 ವರ್ಷಗಳ ಹಿಂದೆ ಮಗಳ ಮದುವೆಗೆಂದು ಪ್ರೀತಿಯಿಂದ ಮಾಡಿಸಿದ ಜುಮುಕಿ ಯಾರ ಸ್ಪರ್ಶವೂ ಇಲ್ಲದೆ ಬಾಕ್ಸ್‌ನಲ್ಲಿ ತಣ್ಣಗೆ ಕುಳಿತಿತ್ತು.

‘ಇದೆಲ್ಲ ಹಳೇ ಫ್ಯಾಷನ್. ಯಾರು ಹಾಕಿಕೊಳ್ಳುತ್ತಾರೆ ಮಮ್ಮಿ’ ಎಂದು ಅಂದು ಮೂಗು ಮುರಿದಿದ್ದಳು ಮಗಳು. ಆಸೆಯಿಂದ ಮಾಡಿಸಿದ ಒಡವೆ ಬಗ್ಗೆ ಮಗಳ ಪ್ರತಿಕ್ರಿಯೆ ಕೇಳಿ ತಾಯಿಗೂ ಬೇಸರವಾಗಿತ್ತು. ಈಗ ಇದ್ದಕ್ಕಿದ್ದಂತೆ ಜುಮುಕಿ ಮೇಲೆ ಮಗಳಿಗೆ ಮೋಹ ಬಂದಿದ್ದು ಕಂಡು ತಾಯಿಗೆ ಆಶ್ಚರ್ಯವೂ, ಖುಷಿಯೂ ಒಮ್ಮೆಲೇ ಆಗಿತ್ತು.

ಬೆಂಗಳೂರಿನಲ್ಲಿ ಪದವಿ ಓದುತ್ತಿರುವ ಲೀನಾಗೆ ಮೊದಲಿನಿಂದಲೂ ಒಡವೆ ಎಂದರೆ ಅಷ್ಟಕ್ಕಷ್ಟೇ. ಅಮ್ಮನ ಒತ್ತಾಯಕ್ಕೆ ಚಿಕ್ಕ ಸ್ಟಡ್ ಕಿವಿಗೇರಿಸಿಕೊಂಡಿದ್ದಳು. ಇಳಿ ಬೀಳುವ ಕಿವಿಯೋಲೆ, ದೊಡ್ಡ ದೊಡ್ಡ ರಿಂಗ್ ಹಾಕಿಕೊಳ್ಳುವ ಸ್ನೇಹಿತೆಯರ ಕಂಡರೆ ಅವಳು ಆಚ್ಚರಿಯಿಂದ ಕಣ್ಣರಳಿಸುತ್ತಿದ್ದಳು. ‘ಪುಟ್ಟ ಕಿವಿಗೆ ಅಷ್ಟು ದೊಡ್ಡ ಒಡವೆ ಹೇಗೆ ಹಾಕಿಕೊಳ್ಳುತ್ತೀರಿ. ಕಿವಿಗೆ ಭಾರವಾಗುವುದಿಲ್ಲವೇ’ ಎಂದು ಒಮ್ಮೆ ಸ್ನೇಹಿತೆಯರನ್ನು ಕೇಳಿಯೇ ಬಿಟ್ಟಿದ್ದಳು. ‘ನೀನೂ ಒಮ್ಮೆ ಹಾಕಿಕೊಂಡು ಮುಖದ ಅಂದ ನೋಡಿಕೊ. ಆಗ ಕಿವಿಯೋಲೆಗಳ ಫ್ಯಾನ್ ಆಗುತ್ತೀಯ’ ಎಂದಿದ್ದರು. ಆ ಮಾತನ್ನು ಅಷ್ಟಾಗಿ ಕಿವಿಗೆ ಹಾಕಿಕೊಳ್ಳದ ಲೀನಾ ಸುಮ್ಮನಾಗಿದ್ದಳು. ಆದರೆ, ಶಾಪಿಂಗ್‌ಗೆಂದು ಕಮರ್ಷಿಯಲ್ ಸ್ಟ್ರೀಟ್‌ಗೆ ಹೋದಾಗಲೆಲ್ಲ ಬೀದಿಯುದ್ದಕ್ಕೂ ಸಾಲಾಗಿ ತೊನೆದಾಡುತ್ತಿದ್ದ ಜುಮುಕಿಗಳತ್ತಲೇ